

ಈ ಮೊದಲು ಕರ್ಣನಿಂದ ಘಾಸಿಗೊಂಡ ಧರ್ಮರಾಯನು ಅರ್ಜುನನಿಗೆ ಗಾಂಡೀವವನ್ನು ಹರಿಗೆ ಕೊಟ್ಟು ನೀನು ಕುದುರೆಗಳ ವಾಘೆಯವನ್ನು ಹಿಡಿ ಎಂದಾಗ ಅರ್ಜುನ ಉಪಾಂಶುವ್ರತ ಪ್ರತಿಜ್ಞೆಯ ಕಾರಣ ಕತ್ತಿ ಹಿಡಿದು ಹಿರಿಯ ಸಹೋದರನನ್ನೇ ಕೊಲ್ಲಲು ಮುನ್ನುಗ್ಗುತ್ತಾನೆ. ಅಂತರಂಗ ದ್ವೇಷ ಎಂಬುದು ಎದುರೆದುರು ನಿಂತ ವೀರರ ಮನದಲ್ಲಿ ಮಾತ್ರ ಇರುವಂಥದ್ದಾಗಿರದೆ ಸಹೋದರ ಸಂಬಂಧದಲ್ಲಿಯೂ ಹುದುಗಿದ್ದು, ಸಮಾಯಾಸಮಯಗಳಲ್ಲಿ ಅದು ಸರ್ಪದಂತೆ ಮೇಲೇಳಬಹುದು. ಹಾಗೆಯೇ ಕೊಲ್ಲಲೇಬೇಕಾದ ಶತ್ರುಗಳನ್ನು ಕುರಿತು ಅಂತರಂಗ ಆರ್ದ್ರವಾಗಿಬಿಡಬಹುದು. ಅಂಥದೊಂದು ಸಂದರ್ಭವನ್ನು ಸೃಷ್ಟಿಸುವ ಕುಮಾರವ್ಯಾಸ ಇಷ್ಟರವರೆಗೂ ಎದುರು ನಿಂತ ಶತ್ರು ಕರ್ಣನನ್ನು ಕೊಲ್ಲಲು ಹವಣಿಸಿದ್ದವನನ್ನು ಕುರಿತು ಜೀವವೀತನ ಮೇಲೆ ಕರಗುವುದು ಆವ ಸಖನೆಂದರಿಯೆ ಎನ್ನಿಸುತ್ತಾನೆ. ಈ ಬಗೆಯ ಯುದ್ಧರಂಗದಲ್ಲಿಯ ಸೋದರಭಾವ ಚಿತ್ರಣ ವ್ಯಾಸನಲ್ಲಿ ಕಂಡುಬರುವುದಿಲ್ಲ. ಬದಲಾಗಿ ಅರ್ಜುನನು ಕರ್ಣ ಹಿಂದೆ ಮಾಡಿದ್ದ ದುಷ್ಕೃತ್ಯವೆಲ್ಲವನ್ನೂ ನೆನೆಯುತ್ತ ನಿಂತಿದ್ದನಂತೆ. ಅದೇ ಸಮಯದಲ್ಲಿ ಅದನ್ನೆಲ್ಲ ಕೃಷ್ಣನೂ ಮತ್ತೆ ನೆನಪಿಸುತ್ತ ಉರಿಯುತ್ತಿದ್ದ ಬೆಂಕಿಗೆ ಆಜ್ಯ ಸುರಿಯುವಂತೆ 'ದಿವ್ಯಾಸ್ತ್ರೇಣೈವ ನಿರ್ಭಿದ್ಯ ಪಾತಯಸ್ವ ಮಹಾಬಲ' ಎಂದ ಕೃಷ್ಣ, ದಿವ್ಯಾಸ್ತ್ರದಿಂದಲೇ ಇವನನ್ನು ಭೇದಿಸಿ ಕೆಳಕ್ಕುರುಳಿಸು ಎನ್ನುತ್ತಾನೆ. ಕುರುಕ್ಷೇತ್ರ ಎಂದರೆ ಅದು ಶತ್ರುಗಳ ನಡುವಣ ಯುದ್ಧ ಎಂದು ಕುಮಾರವ್ಯಾಸ ಪರಿಗಣಿಸದೆ ಪಂಪ, ರನ್ನರಂತೆ ಮನುಷ್ಯ ಬದುಕುವುದು ಸಂಧಿ ಸಂಗಾತದಿಂದಲೇ ಎಂಬುದನ್ನು ಪುನರಾವರ್ತನೆಯಾಗಿ ಹೇಳುತ್ತಾನೆ. ಈ ಘನ ಆಶಯ ಜಗತ್ತಿನ ಸಾಹಿತ್ಯಕ್ಕೆ ಕನ್ನಡದ ಮಹಾಕವಿಗಳ ಕೊಡುಗೆ.

★★★

ಕುರುಕ್ಷೇತ್ರದಲ್ಲಿ ಯುದ್ಧಾನಂತರ ತೀರಿಕೊಂಡ ತಂತಮ್ಮ ಗಂಡಂದಿರ ಶವವನ್ನು ಹುಡುಕುವ ಹೆಣ್ಣು ಮಕ್ಕಳ ಆಕ್ರಂದನದ ವಿವರಗಳೂ ಇವೆ. ಅಶ್ವತ್ಥಾಮನು ಅರ್ಧರಾತ್ರಿಯಲ್ಲಿ ಪಾಂಡುಪುತ್ರರನ್ನು ಕೊಂದು ಬರುವಾಗ ಅದರ ಅರಿವಾಗಿ ಭೀಮ, ಅರ್ಜುನರು ಅಶ್ವತ್ಥಾಮನನ್ನು ಹತಗೈಯಲು ಸಿದ್ಧರಾಗುತ್ತಾರೆ. ಯುದ್ಧದ ಭೀಕರತೆಯಿಂದ ಬಳಲಿ ಹೆದರಿದ ದ್ರೌಪದಿ, ಅಶ್ವತ್ಥಾಮನನ್ನು ಕೊಂದರೆ